# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.2445/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 30.12.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: (1) ಶ್ರೀ. ಚಿಕ್ಕಹುಚ್ಚ, ಶಿಕ್ಷಕರು, ಜವನಗಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ಇವರು ತೋಟಗಾರಿಕೆ ಇಲಾಖೆಯಿಂದ ಪಡೆದುಕೊಂಡ ಸಹಾಯಧನವನ್ನು ವಸೂಲಿ ಮಾಡಿ ಸರ್ಕಾರಿ ಖಜಾನೆಗೆ ತುಂಬಿಸಿಕೊಳ್ಳಲು ಸೂಕ್ತಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಕುರಿತು.

*******

ಶ್ರೀ. ರಂಗಸ್ವಾಮಿ, ಪಾಳ್ಯ ಗ್ರಾಮದ ನಿವಾಸಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಭೀಮಪ್ಪ ನಾಯಕ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, (2) ಶ್ರೀ ಎಂ.ಶಿವಮಾದಪ್ಪ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಮತ್ತು (3) ಶ್ರೀ ಚಿಕ್ಕಹುಚ್ಚ, ಶಿಕ್ಷಕರು, ಜವನಗಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ " 1 ರಿಂದ 3ನೇ ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2.ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ 3ನೇ ಎದುರುದಾರರು ಮಳವಳ್ಳಿ ತಾಲ್ಲೂಕಿನ ಜವನಗಳ್ಳಿ ಗ್ರಾಮದಲ್ಲಿ ಶಿಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದು, 2014–15ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಬಡವರಿಗೆಂದು ಮೀಸಲಿರುವ 64,080/–ರೂ.ಗಳ ಸಹಾಯಧನವನ್ನು ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಗ್ರಾಮದ ಸರ್ವೆ ನಂ.570/ಬಿ ಮತ್ತು 546/ಸಿ

ಜಮೀನುಗಳಿಗೆ ಪಡೆದಿರುತ್ತಾರೆಂದು, ಅಲ್ಲದೇ 3ನೇ ಎದುರುದಾರರು ಮತ್ತು ಆತನ ಹೆಂಡತಿ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದು, ಇಬ್ಬರ ಆದಾಯ ತಿಂಗಳಿಗೆ ರೂ.44,000/- ಆಗಿರುತ್ತದೆ. ಸಣ್ಣ ರೈತರಿಗೆ ಸಿಗಬೇಕಾದ ಸಹಾಯಧನವನ್ನು 3ನೇ ಎದುರುದಾರರು ಪಡೆದುಕೊಂಡ ಕಾರಣ, ಸಣ್ಣ ರೈತರು ಸರ್ಕಾರದ ಸೌಲಭ್ಯದಿಂದ ವಂಚಿತರಾಗಿರುತ್ತಾರೆ, ಕಾರಣ ಎದುರುದಾರರ ವಿರುದ್ಧ ಕ್ರಮಕೈಗೊಂಡು ಅವರು ಪಡೆದುಕೊಂಡ ಸಹಾಯಧನವನ್ನು ಸರ್ಕಾರಕ್ಕೆ ಮರುಪಾವತಿಸಿಕೊಳ್ಳಬೇಕು ಮತ್ತು ಸದರಿಯವರ ಮೇಲೆ ಕಾನೂನುರೀತ್ಯಾ ಕ್ರಮಕೈಗೊಳ್ಳಬೇಕೆಂದು ಕೋರಿದ್ದಾರೆ.

3. ದೂರು ದಾಖಲಾದ ನಂತರ ಎದುರುದಾರರಿಗೆ ಮತ್ತು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಕೊಳ್ಳೇಗಾಲ, ಅವರಿಗೆ ನೋಟೀಸು ನೀಡಿ ಆಕ್ಷೇಪಣೆಯನ್ನು ಸಲ್ಲಿಸಲು ಕೋರಲಾಗಿತ್ತು. ಎದುರುದಾರರು ಹಾಗೂ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಕೊಳ್ಳೇಗಾಲ, ಅವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

4. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 3ನೇ ಎದುರುದಾರರು ಮಳವಳ್ಳಿ ತಾಲ್ಲೂಕಿನ ಜವನಗಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಶಿಕ್ಷಕರೆಂದು ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಪತ್ನಿಯು ಸಹ ಸರ್ಕಾರಿ ಶಿಕ್ಷಕರಾಗಿರುತ್ತಾರೆ. ಈ ಕಛೇರಿಯಿಂದ ನೋಟೀಸು ಬಂದ ನಂತರ 3ನೇ ಎದುರುದಾರರ ವಿರುದ್ಧ ಮಾಡಿದ ಆಪಾದನೆಯ ಕುರಿತು ವಿಚಾರಣೆ ಮಾಡಲಾಗಿದ್ದು, ಸದರಿ ಶಿಕ್ಷಕರು ತೋಟಗಾರಿಕೆ ಇಲಾಖೆಯಿಂದ ಸಹಾಯಧನ ಪಡೆದಿರುವುದು ತಿಳಿದುಬಂದಿರುತ್ತದೆಂದು, ಈ ಬಗ್ಗೆ ತೋಟಗಾರಿಕೆ ಇಲಾಖೆಗೆ ಪತ್ರ ಬರೆದು ಎದುರುದಾರರು ತೋಟಗಾರಿಕೆ ಇಲಾಖೆಯಿಂದ ಸಹಾಯಧನವನ್ನು ಪಡೆದಿದ್ದಾರೆಯೇ, ಪಡೆದಿದ್ದರೆ ಅವರು ಸಹಾಯಧನವನ್ನು ಪಡೆಯಲು ಅವಕಾಶವಿದೆಯೇ, ಷರತ್ತುಗಳೇನಾದರೂ ಇವೆಯೇ, ಆದಾಯಮಿತಿ ಏನಾದರೂ ಇದೆಯೇ ಎಂದು ಮಾಹಿತಿ ನೀಡಲು ಕೇಳಿದ್ದರೂ ಸಹ ತೋಟಗಾರಿಕೆ ಇಲಾಖೆಯಿಂದ ಯಾವುದೇ ಲಿಖಿತ ಉತ್ತರ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ

ಸಂಬಂಧವಾಗಿ ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಇವರಿಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ಸರ್ಕಾರಿ ನೌಕರರು ಸಹ ಸಹಾಯಧನವನ್ನು ಪಡೆಯಲು ಅರ್ಹರಿರುತ್ತಾರೆಂದು ಮೌಖಿಕವಾಗಿ ತಿಳಿಸಿರುತ್ತಾರೆ,ಆದರೆ ಲಿಖಿತವಾಗಿ ತಿಳಿಸಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು, ತೋಟಗಾರಿಕೆ ಇಲಾಖೆಯಲ್ಲಿ ಸಹಾಯದನ ಪಡೆದಿರುವ ಕುರಿತ ವಿಷಯವು ತಮ್ಮ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತಿಳಿಸಿರುತ್ತಾರೆ.

5. ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಇವರು ತಮ್ಮ ವರದಿಯಲ್ಲಿ ಸಹಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ 3ನೇ ಎದುರುದಾರರಾದ ಶ್ರೀ ಚಿಕ್ಕಹುಚ್ಚ, ಅವರು ತಮಗೆ ಸೇರಿದ ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಗ್ರಾಮದ ಸ.ನಂ.570/ಬಿ ಮತ್ತು 546/ಸಿ ಜಮೀನಿನಲ್ಲಿ ಬಾಳೆ ಮತ್ತು ಟೊಮೇಟೋ ಬೆಳೆಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಕ್ಕೆ ರೂ.44,081/-ರೂ.ಗಳು ಹಾಗೂ ಅಂಗಾಂಶ ಕಸಿ ಬಾಳೆ ಬೆಳೆದಿರುವುದಕ್ಕೆ ರೂ.20,000/-ಗಳ ಸಹಾಯಧನವನ್ನು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದು ಇಲಾಖಾ ಮಾರ್ಗಸೂಚಿ ಪ್ರಕಾರ ಸಹಾಯಧನ ಪಡೆದಯಲು ಆರ್.ಟಿಸಿ ಹಾಗೂ ಇನ್ನಿತರೆ ದಾಖಲಾತಿಗಳನ್ನು ಒದಗಿಸಿದಲ್ಲಿ ಹಾಗೂ ಪರಿಶೀಲನೆ ವೇಳೆಯಲ್ಲಿ ಬೆಳೆ ಅಥವಾ ಇನ್ನಿತರ ಉಪಕರಣಗಳು ಜಮೀನಿನಲ್ಲಿ ಲಭ್ಯವಿದ್ದಲ್ಲಿ ಸಹಾಯಧನ ಮಂಜೂರು ಮಾಡಬಹುದಾಗಿರುತ್ತದೆಂದು ತಿಳಿಸಿರುತ್ತಾರೆ.

6. ಈ ಕಛೇರಿಯಿಂದ 3ನೇ ಎದುರುದಾರರಾದ ಸರ್ಕಾರಿ ಶಿಕ್ಷಕರು ಬಡವರಿಗೆಂದು ಮೀಸಲಿರಿಸಿರುವ ಸಹಾಯಧನವನ್ನು ಪಡೆಯಲು ಅರ್ಹರಿರುತ್ತಾರೆಯೇ ಎಂಬುದರ ಬಗ್ಗೆ ಸ್ಪಷ್ಟವಾದ ವರದಿಯನ್ನು ಸಲ್ಲಿಸಲು ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಅವರನ್ನು ಕೋರಿದಾಗ ಸದರಿಯವರು ಪುನ: ತೋಟಗಾರಿಕೆ ಇಲಾಖೆಯ ಮಾರ್ಗಸೂಚಿ ಪ್ರಕಾರ ಸಹಾಯಧನಪಡೆಯಲು ಫಲಾನುಭವಿಗಳ ಹೆಸರಿನಲ್ಲಿ ಆರ್.ಟಿ.ಸಿ.ಹಾಗೂ ಇನ್ನಿತರ ದಾಖಲಾತಿಗಳು ಇದ್ದಾಗ ಮತ್ತು ಪರಿಶೀಲನೆ ವೇಳೆಯಲ್ಲಿ ಬೆಳೆ ಹಾಗೂ ಇನ್ನಿತರ ಉಪಕರಣಗಳು ಜಮೀನಿನಲ್ಲಿ ಲಭ್ಯವಿದ್ದಾಗ ಸಹಾಯಧನವನ್ನು ಸರ್ಕಾರಿ ನೌಕರರಿಗೆ ಮಂಜೂರು ಮಾಡಬಹುದು

ಎಂದು ತಿಳಿಸಿರುತ್ತಾರೆ. ಸದರಿಯವರು ಮುಂದುವರೆದು, 3ನೇ ಎದುರುದಾರರು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 'ಬಾಳೆ ಬೆಳೆಯಲ್ಲಿ ನಿಖರ ಬೇಸಾಯ' ಯೋಜನೆಯಡಿ ಸಹಾಯಧನವನ್ನು ಪಡೆದಿರುತ್ತಾರೆ. ಸರ್ಕಾರದ ಸುತ್ತೋಲೆಯ ಪ್ರಕಾರ ಮೇಲ್ಕಂಡ ಯೋಜನೆಯಡಿ ಸಹಾಯಧನವನ್ನು ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ, ಫಲಾನುಭವಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರೆ ಸಹಾಯಧನ ಪಡೆಯಬಹುದೆಂದು ತಿಳಿಸಿರುತ್ತಾರೆ. ಸರ್ಕಾರಿ ನೌಕರರಿಗೆ ಸಹಾಯಧನ ನೀಡಬೇಕು ಅಥವಾ ನೀಡಬಾರದೆಂಬ ಯಾವುದೇ ಇಲಾಖಾ ಮಾರ್ಗಸೂಚಿ ಇರುವುದಿಲ್ಲ ಹಾಗೂ ಬಡವರಿಗೆ ಎಂದು ಸರ್ಕಾರದಿಂದ ಅವರ ಇಲಾಖೆಗೆ ಯಾವುದೇ ಅನುದಾನ ಮೀಸಲಿರಲಿಲ್ಲವೆಂದು ತಿಳಿಸಿರುತ್ತಾರೆ.

7. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಗ್ರಾಮದಲ್ಲಿ ತಾವು ವಾಸವಾಗಿದ್ದು, ಮಳವಳ್ಳಿ ತಾಲ್ಲೂಕಿನ ಜವನಗಳ್ಳಿಯಲ್ಲಿ ಸರ್ಕಾರಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಗ್ರಾಮದಲ್ಲಿ ಸರ್ವೆ ನಂ.550/ಬಿ ಮತ್ತು 546/ಸಿಯಲ್ಲಿ ಜಮೀನು ಹೊಂದಿದ್ದು, ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಜಮೀನಿನಲ್ಲಿ ವ್ಯವಸಾಯ ಕೂಡ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. 2015-16ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ದೊರೆಯಬಹುದಾದ ಸಹಾಯಧನವನ್ನು ದಾಖಲಾತಿಗಳನ್ನು ಒದಗಿಸಿ ಒಟ್ಟು ರೂ.64,080/- ಸಹಾಯಧನವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಅವರು ಸರ್ಕಾರಿ ಸೇವೆಯಲ್ಲಿದ್ದು, ಸರ್ಕಾರದಿಂದ ದೊರೆಯುವ ವ್ಯವಸಾಯದ ಸೌಲಭ್ಯಗಳನ್ನು ತೋಟಗಾರಿಕೆ ಇಲಾಖೆಯಿಂದ ಪಡೆದಿದ್ದು, ಸರ್ಕಾರಿ ಸೇವೆಯಲ್ಲಿರುವವರು ಸರ್ಕಾರಿ ಯೋಜನೆಗಳನ್ನು ಪಡೆಯಬಾರದೆಂಬ ಯಾವುದೇ ಮಾನದಂಡವಾಗಲೀ ಅಥವಾ ನಿಯಮಗಳಾಗಲೀ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

8. 3ನೇ ಎದುರುದಾರರು ಸರ್ವೆ ನಂ.550/2 ಮತ್ತು 546/2ರಲ್ಲಿ ಜಮೀನು ಹೊಂದಿರುವ ಕುರಿತು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ. 3ನೇ ಎದುರುದಾರರು ಹಾಗೂ ಆತನ ಹೆಂಡತಿ ಶಿಕ್ಷಕರಾಗಿ ಸರ್ಕಾರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ಒಪ್ಪಿರುತ್ತಾರೆ. 3ನೇ

ಎದುರುದಾರರು ಮತ್ತು ಆತನ ಹೆಂಡತಿ ಮಾಸಿಕ ಒಟ್ಟು ರೂ.44,000/- ಸಂಬಳ ಪಡೆಯುತ್ತಿದ್ದಾರೆಂದು ದೂರುದಾರರು ಆಪಾದಿಸಿರುವ ವಿಚಾರವನ್ನು 3ನೇ ಎದುರುದಾರರು ಅಲ್ಲಗಳೆದಿರುವುದಿಲ್ಲ. ಅದೇ ರೀತಿ ಸರ್ಕಾರಿ ನೌಕರರು ವ್ಯವಸಾಯದ ಜಮೀನು ಹೊಂದಬಾರದೆಂಬ ಯಾವುದೇ ನಿಯಮ ಅಥವಾ ಷರತ್ತು ಇರುವುದಿಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳ ಪ್ರಕಾರ 3ನೇ ಎದುರುದಾರರು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಇಲಾಖೆಯಿಂದ ಹನಿ ನೀರಾವರಿ ಮತ್ತು ಅಂಗಾಂಶ ಕಸಿ ಬಾಳೆ ಬೆಳೆಯಲು ಸರ್ಕಾರದಿಂದ ಸಹಾಯಧನವನ್ನು ಪಡೆದಿರುತ್ತಾರೆಂದು ಕಂಡುಬಂದಿರುತ್ತದೆ.

9. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಕೇಂದ್ರ ಸರ್ಕಾರ ಚಿಕ್ಕ ರೈತರಿಗಾಗಿ ಮಾಡಿದ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಚಿಕ್ಕ ಹಾಗೂ ಅತಿಸಣ್ಣ ರೈತರಿಗೆ ಸಹಾಯಕ್ಕಾಗಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸದರಿ ಯೋಜನೆಯ ಪ್ರಕಾರ ಇರುವ ಸೌಲಭ್ಯಗಳನ್ನು ಕಲಂ.8 ಮತ್ತು 9ರಲ್ಲಿ ತಿಳಿಸಲಾಗಿದ್ದು, ಈ ಕೆಳಕಂಡಂತಿರುತ್ತದೆ.

> *8.6 While sanctioning projects under RKVY, shall also ensure that adequate coverage of small and marginal farmers, schedule caste, schedule tribes, physically challenged, women, and other weaker segments of society is ensured, so that the benefits of implementation are inclusive and accrue to the intended beneficiaries in accordance with Govt. guidelines and policies.*
>
> ***9.1:*** *State Agriculture Department shall be the Nodal Department for implementation of the scheme. For administrative convenience, and ease of implementation, the State Governments may identify, or create an exclusive agency for implementing the scheme on a fast-track. Even where such an agency is created/designated, the entire responsibility of ensuring proper implementation of RKVY rests with the State Agriculture Department.*

10. ಮೇಲ್ಕಂಡ ಕೇಂದ್ರ ಸರ್ಕಾರದ ಯೋಜನೆಯ ಪ್ರಕಾರ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಹಾಯಧನವನ್ನು ಪಡೆಯಲು ಫಲಾನುಭವಿ ರೈತರಾಗಿರಬೇಕು, ಮತ್ತು

38

ಕಷ್ಟದಲ್ಲಿರುವ ರೈತರಾಗಿರಬೇಕು ಎಂದು ತಿಳಿಸಿರುತ್ತದೆ. 3ನೇ ಎದುರುದಾರರು ಜಮೀನುಗಳನ್ನು ಹೊಂದಿದ್ದರೂ ಸಹ ಸರ್ಕಾರಿ ಸೇವೆಯಲ್ಲಿರುತ್ತಾರೆ. 3ನೇ ಎದುರುದಾರರು ಮತ್ತು ಆತನ ಹೆಂಡತಿ ಸರ್ಕಾರದಿಂದ ರೂ.44,000/-ರೂ.ಗೆ ಮೇಲ್ಪಟ್ಟು ಸಂಬಳ ಪಡೆಯುತ್ತಿದ್ದು, ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ. ಕಾರಣ 3ನೇ ಎದುರುದಾರರನ್ನು ಮಾರ್ಜಿನಲ್ ಫಾರ್ಮರ್ ಎಂದು ಕರೆಯಲಾಗುವುದಿಲ್ಲ. ಕಾರಣ ಬಡರೈತರಿಗಾಗಿ ಹಮ್ಮಿಕೊಂಡ ಯೋಜನೆಯಲ್ಲಿ 3ನೇ ಎದುರುದಾರರು ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ. 3ನೇ ಎದುರುದಾರರು ಸಲ್ಲಿಸಿದ ಅರ್ಜಿಯಲ್ಲಿ ತಾನು ರೈತನೆಂದು ಮಾತ್ರ ತಿಳಿಸಿದ್ದು, ತಾವು ಶಿಕ್ಷಕರಾಗಿರುವ ವಿಷಯವನ್ನು ಅರ್ಜಿಯಲ್ಲಿ ತಿಳಿಸಿರುವುದಿಲ್ಲ. ಇದರಿಂದಾಗಿ ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರಿಗೆ ತಾನು ಶಿಕ್ಷಕನಾಗಿರುವ ವಿಷಯವನ್ನು ಮರೆಮಾಚಿ ತಾನು ಕೇವಲ ರೈತನೆಂದು ಹೇಳಿ ರೈತರಿಗೆ ಸಿಗಬೇಕಾದ ಸೌಲಭ್ಯವನ್ನು ಪಡೆದುಕೊಂಡು ಸರ್ಕಾರಕ್ಕೆ ಮೋಸಮಾಡಿ, ಕರ್ತವ್ಯಲೋಪವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 3ನೇ ಎದುರುದಾರರು ತೋಟಗಾರಿಕೆ ಇಲಾಖೆಯಿಂದ ಪಡೆದುಕೊಂಡ ಸಹಾಯಧನವನ್ನು ವಸೂಲಿ ಮಾಡಿ ಸರ್ಕಾರಿ ಖಜಾನೆಗೆ ತುಂಬಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದೂ ಕೋರಲಾಗಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

30/12/17.

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

39